Aerodrome near Davangere.

Q.—301. Sri P. R. RAMAIYA (Basavangudi).—

Will the Government be pleased to state :—

(*a*) whether it is a fact that an aerodrome has been constructed near Davangere ;

(*b*) the amount that was spent on the construction on this aerodrome ;

(*c*) whether there is any prospect of this aerodrome being made use of by service-aeroplanes and if so, from what date ?

A.—Sri H. SIDDAVEERAPPA (Minister for Home and Industries).—

(*a*) Yes.
(*b*) Rs. 15,300.
(*c*) Not at present.

ಶ್ರೀ ಪಿ. ಆರ್. ರಾಮಯ್ಯ.—ಈ aerodrome construct ಮಾಡಿ ಎಷ್ಟು ವರ್ಷಗಳು ಆದವು ?

*ಶ್ರೀ ಎಚ್. ಸಿದ್ದವೀರಪ್ಪ.—ಸುಮಾರು ಒಂದು ವರ್ಷ ಆಗುತ್ತಾ ಬಂತು.

ಶ್ರೀ ಪಿ. ಆರ್. ರಾಮಯ್ಯ.—ಈಗ ಈ aerodrome ನ್ನು ಯಾವ ರೀತಿ ಉಪಯೋಗಿಸುತ್ತಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—Aerodrome joy rides ಗೆ ಉಪಯೋಗಿಸುತ್ತಾರೆ. ಮತ್ತು ಅಲ್ಲಿ ಟ್ರೈನಿಂಗ್‌ತೆಗೆದುಕೊಳ್ಳುವ ವಿದ್ಯಾರ್ಥಿಗಳು ಇದ್ದಾರೆ. ಅವರಿಗೂ ಸಹಾ ಕೊಡುತ್ತಾರೆ. ಅದನ್ನು ಹೀಗೆ ಪ್ರಾಯೋಗಿಕವಾಗಿ ಉಪಯೋಗಿಸುತ್ತಿದ್ದೇವೆ.

ಶ್ರೀ ಪಿ. ಆರ್. ರಾಮಯ್ಯ.—ಈಗ ಆ ರೀತಿಯಾದ ತಮ್ಮ ಉದ್ದೇಶ ನೆರವೇರುತ್ತಾ ಇದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು. ಅದು ಸಫಲವಾಗುತ್ತಿದೆ. ಇನ್ನು ಸ್ವಲ್ಪ clearance ಮಾಡಬೇಕಾಗಿದೆ. ಅದು ಮಾಡಿದ ಕೂಡಲೆ ತುಂಬಾ ಅನುಕೂಲವಾಗುತ್ತದೆ.

ಶ್ರೀ ಪಿ. ಆರ್. ರಾಮಯ್ಯ.—Aerodrome ಆಡಳಿತ ಯಾರ ಕೈಯಲ್ಲಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ಸರ್ಕಾರದ ಕೈಯಲ್ಲಿ.

ಶ್ರೀ ಪಿ. ಆರ್. ರಾಮಯ್ಯ.—ಅದಕ್ಕೆ ಎಷ್ಟು ಖರ್ಚಾಗುತ್ತಿದೆ ?

Sri H. SIDDAVEERAPPA.—Recurring expenditure is nil at the moment.

ಶ್ರೀ ಪಿ. ಆರ್. ರಾಮಯ್ಯ.—ಯಾರಾದರೂ ಈ ರೀತಿಯಾಗಿ Aerodrome ಮಾಡಬೇಕು ಎಂದು ಮನವಿ ತಮಗೆ ಕಳುಹಿಸಿಕೊಟ್ಟಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಸರ್ಕಾರದವರು ಎಲ್ಲೆಲ್ಲಿ Aerodrome ಮಾಡಬೇಕು ಎನ್ನುವ ದೃಷ್ಟಿಯಿಂದ ಯೋಚನೆಮಾಡಿ ಮಾಡುತ್ತಿದ್ದಾರೆ.

ಶ್ರೀ ಬಿ. ಮಾಧವಾಚಾರ್.—ಈಗ ಇನ್ನೂ ಎಲ್ಲೆಲ್ಲಿ aerodrome ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದಾರೆ ?

ಶ್ರೀ ಎಚ್. ಸಿದ್ದವೀರಪ್ಪ.—ಭದ್ರಾವತಿ, ಹಾನನ ಮುಂತಾದ ಕಡೆಗಳಲ್ಲಿ.

Sri Mulka GOVINDA REDDY.—Are the Government aware that representations have been made that æroplanes plying between Bombay and Bangalore should stop at Davangere ?

Sri H. SIDDAVEERAPPA.—It may become a nucleus centre.

Sri Mulka GOVINDA REDDY.—Are the Government aware that the Postal Authorities are thinking of having such a plan to stop at Davangere ?

Sri H. SIDDAVEERAPPA.—I have not received any information like that officially.

ಶ್ರೀ ಜಿ. ದುಗ್ಗಪ್ಪ.—ತುಂಗಭದ್ರಾ ಪ್ರಾಜೆಕ್ಟ್ ಏರಿಯಾದಲ್ಲಿ Aerodrome ಮಾಡತಕ್ಕಂಥ ಯೋಜನೆ ಸರ್ಕಾರದ ಗಮನದಲ್ಲಿದೆಯೇ ?

Mr. SPEAKER.—That does not arise out of this question.

Electricity supply to villages in Krishnarajanagar Taluk.

Q.—53. Sri S. H. THAMMIAH *alias* HANUMANTHEGOWDARA T HAMMIAH (Krishnarajanagar).—

Will the Government be pleased to state :—

(*a*) the villages in Krishnarajanagar Taluk in respect of which supply of electricity has not been made, even though the estimates in regard to them have been sanctioned ;

(*b*) the number of villages that have made representations to Government asking for the supply of electric power ?

A.—Dr. R. NAGAN GOWDA (Minister for Agriculture).—

(*a*) None.
(*b*) Eight.

ಶ್ರೀ ಎಸ್. ಎಚ್. ತಮ್ಮಯ್ಯ.—ಕೃಷ್ಣರಾಜನಗರ ತಾಲ್ಲೂಕಿನ ಹಂಪಾಪುರ ವ ಎಂತಾದ ಗ್ರಾಮಗಳಿಗೆ estimate sanction ಆಗಿದೆಯೇ ?

*ಡಾ॥ ಆರ್. ನಾಗನಗೌಡ.—Estimate ಇನ್ನೂ sanction ಆಗಿಲ್ಲ.

ಶ್ರೀ ಎಸ್. ಎಚ್. ತಮ್ಮಯ್ಯ.—ಏತಕ್ಕೋಸ್ಕರ sanction ಆಗಿಲ್ಲ ?

ಡಾ॥ ಆರ್. ನಾಗನಗೌಡ.—Estimate preparation ಆಗಿದೆ. ಅಲ್ಲಿ ಕೃಷ್ಣರಾಜನಗರದ station capacity ಇನ್ನೂ ಜಾಸ್ತಿ ಆಗಿಲ್ಲ. Overload ಆಗಿರುವ ಕಾರಣ estimate ಸರ್ಕಾರಕ್ಕೆ ಬಂದಿಲ್ಲ.